(ಗೊಂದಲ)

ಉಪಾಧ್ಯಕ್ಷರು:- ಜಯರಾಂ ಶೆಟ್ಟರೆ ತಾವು ಮಾತನಾಡಿ, ಎರಡು ನಿಮಿಷದಲ್ಲಿ ಸಂಕ್ಷಿಪ್ತವಾಗಿ ಮುಗಿಸಬೇಕು.

ಶ್ರೀ ಸಿ.ಆರ್. ಸಗೀರ್ ಅಹ್ಮದ್:- ಸಮಸ್ಯೆನೇ ಅರ್ಥ ಮಾಡಿಕೊಳ್ಳುವುದಿಲ್ಲವಲ್ಲ ಅಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿ ಚಿರತೆ ಹತ್ತು ಜನ ಆಮಾಯಕರನ್ನು ಕೊಂದಿದೆ. ಆದಕಾರಣ ನಾನು ಶೂನ್ಯ-ವೇಳೆಯಲ್ಲಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಸರ್ಕಾರ ಇದರ ಬಗ್ಗೆ ಏನು ಕ್ರಮ ಜರುಗಿಸಿದೆ? ಆದುದರಿಂದ ದಯಮಾಡಿ ನನಗೆ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು:- ತಮ್ಮನ್ನು ಆಮೇಲೆ ಕರೆಯುತ್ತೇನೆ ತಾವು ಕುಳಿತುಕೊಳ್ಳಿ.

ಊ) ಮಂಗಳೂರು ತಾಲ್ಲೂಕು ತಹಸೀಲ್ದಾರರು ಜನಸಂಪರ್ಕ ಸಭೆ ನಡೆಸುವ ಬಗ್ಗೆ.

ಶ್ರೀ ಕೆ. ಜಯರಾಂ ಶೆಟ್ಟಿ (ಉಳ್ಳಾಲ):- ಸನ್ಮಾನ್ಯ ಉಪಾಧ್ಯಕ್ಷರೇ, ಶಾಸಕರನ್ನು ಕರೆದು ಗ್ರಾಮಾಂತರ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆಯುವುದು ರೂಢಿ ಇದೆ. ನಾನು ಮೊನ್ನೆ 6ನೇ ತಾರೀಖು ವಿಧಾನ ಸಭೆಯಲ್ಲಿ ಪಾಲ್ಗೊಂಡು ನಂತರ ಮಂಗಳೂರು ತಾಲ್ಲೂಕಿನ ತಹಸೀಲ್ದಾರರವರ ಕಚೇರಿಗೆ ಕಾರ್ಯಾರ್ಥವಾಗಿ ಹೋಗಿದ್ದಾಗ ಮಂಗಳೂರು ತಾಲ್ಲೂಕು ತಹಸೀಲ್ದಾರರು ಎಂಟನೇ ತಾರೀಖಿಗೆ ನನ್ನ ಕ್ಷೇತ್ರದ ಬಜಾಲ್ ಗ್ರಾಮದಲ್ಲಿ ಜನ ಸಂಪರ್ಕ ಸಭೆಯನ್ನು ವ್ಯವಸ್ಥೆ ಮಾಡಿದ್ದೇವೆ ನೀವು ಬರಬೇಕು ಎಂದು ನನಗೆ ಹೇಳಿದರು. ನಾನು ತಕ್ಷಣ ಹೇಳಿದೆ ಯಾವುದೇ ಜನ-ಸಂಪರ್ಕ ಸಭೆಯನ್ನು ಶಾಸಕರ ಗಮನಕ್ಕೆ ತಂದು ವ್ಯವಸ್ಥೆ ಮಾಡಬೇಕು, ಇದು ನನ್ನ ಗಮನಕ್ಕೆ ಬಂದಿಲ್ಲ ಹಾಗೂ ಈಗ ವಿಧಾನ ಸಭೆಯ ಅಧಿವೇಶನ ನಡೆಯುತ್ತಿರುವಾಗ ಯಾವುದೇ ರೀತಿಯ ಜನಸಂಪರ್ಕ ಸಭೆಯನ್ನು ಈಗ ನಾವು ಮಾಡಬಾರದು ಆದ್ದರಿಂದ ನಾನು ಬರುವುದಿಲ್ಲ. ಆದಕಾರಣ ಅದನ್ನು ರದ್ದು ಮಾಡಬೇಕೆಂದು ಹೇಳಿದರೆ, ಜಿಲ್ಲಾಧಿಕಾರಿಗಳು ಇಡೀ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕಿನ ಜನಸಂಪರ್ಕ ಸಭೆಯನ್ನು ವ್ಯವಸ್ಥೆ ಮಾಡಿದ್ದಾರೆ. ನಾನು ಅದನ್ನು ರದ್ದು ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಹೇಳಿದರು. ಆದರೆ ನಾನು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ ಶಾಸಕರು ಬರದೆ ಜನಸಂಪರ್ಕ ಸಭೆಗಳನ್ನು ಮಾಡಬಾರದು, ಅದು ವಿರುದ್ಧವಾದ ವಿಚಾರ, ಆದ್ದರಿಂದ ಅದು ಅವ್ಯವಸ್ಥೆ ಆಗುತ್ತದೆ ಎಂದು ಹೇಳಿ ನಾನು ಬಂದೆ. ಆದರೆ ಅದೇ ದಿವಸ ನಾನು ಮನೆಗೆ ಬಂದಾಗ ಒಂದು ಟಪಾಲು ನನಗೆ ಬಂದಿತ್ತು. ಅದು ತಹಸೀಲ್ದಾರರು ನನಗೆ ಕಳುಹಿಸಿದ್ದರು. ಅದರಲ್ಲಿ ತಾವು ಆದೇಶ ನೀಡಿರುವಂತೆ ಬಜಾಲ್ ಗ್ರಾಮದಲ್ಲಿ ಜನಸಂಪರ್ಕ ಸಭೆಯನ್ನು ಕರೆದಿದ್ದೇನೆ ಎಂದು ಬರೆದಿದೆ. ಅದೂ ಅಲ್ಲದೆ ಒಂದು ಕರಪತ್ರವನ್ನು ಮುದ್ರಿಸಿದ್ದಾರೆ. ಆ ಜನಸಂಪರ್ಕ ಸಭೆಯಲ್ಲಿ ಉಲ್ಲಾಳ ಕ್ಷೇತ್ರದ ಶಾಸಕರು ಭಾಗವಹಿಸುತ್ತಾರೆ ಎಂದು ಮುದ್ರಿಸಿದ್ದಾರೆ. ಇದು ಎಲ್ಲಾ ವಿಚಾರ ನನ್ನ ಗಮನಕ್ಕೆ ತಾರದೆ ನನಗೆ ತಿಳಿಸದೆ ಅಧಿಕಾರಿಗಳು ಶಾಸಕರ ಹೆಸರನ್ನು ದುರುಪಯೋಗ ಮಾಡಿದ್ದಾರೆ ಇದರಿಂದ ಏನಾಗುತ್ತದೆ

ಎಂದರೆ ನಾನು ಇನ್ನೊಂದು ಸಲ ಆ ಕ್ಷೇತ್ರಕ್ಕೆ ಹೋಗಲಿಕ್ಕೆ ಬರುವುದಿಲ್ಲ. ನೀವು ಜನಸಂಪರ್ಕ ಸಭೆಯನ್ನು ಮಾಡಿ ನೀವೇ ಬಂದಿಲ್ಲ ಎಂದು ನನ್ನ ಕ್ಷೇತ್ರದ ಜನ ಹೇಳುತ್ತಿದ್ದಾರೆ. ಜನರ ದೃಷ್ಟಿಯಲ್ಲಿ ನಾನು ಹಗುರವಾಗುತ್ತೇನೆ. ಹಾಗೂ ಜನರ ದೃಷ್ಟಿಯಲ್ಲಿ ನಾನು ಸ್ಪಂದಿಸುವುದಿಲ್ಲವೆಂದ ಹಾಗಾಗುತ್ತದೆ. ಅಧಿಕಾರಿಗಳು ಈ ರೀತಿ ಏತಕ್ಕೆ ಮಾಡುತ್ತಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ.

ಇನ್ನೊಂದು ವಿಚಾರ ಇಡೀ ಆರು ತಿಂಗಳ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ತಾರೀಖುಗಳನ್ನು ಹಾಕಿ ಕೊಂಡು ಅವರು ಜನಸಂಪರ್ಕ ಸಭೆಯ ದಿನಾಂಕಗಳನ್ನು ಕೊಟ್ಟಿದ್ದಾರೆ. ನಾನು ತಮಗೆ ಕರ ಪತ್ರವನ್ನು ಕಳುಹಿಸುತ್ತಿದ್ದೇನೆ ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕುಂಬೈ ಸುಂದರ್‌ರಾವ್:- ಮಾನ್ಯ ಉಪಾಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲೂ ಕೂಡ ಇದೇ ಆಗಿದೆ. ನಾನು ಫೋನ್ ಮಾಡಿ ಹೇಳಿದರೂ ಕೂಡ ನನ್ನ ಗಮನಕ್ಕೆ ತಾರದೆ, ನನ್ನನ್ನು ಕೇಳದೆ ಜನಸಂಪರ್ಕ ಸಭೆಯನ್ನು ಮಾಡಿದ್ದಾರೆ.

ಶ್ರೀ ರಮೇಶ್ ಸಿ. ಜಿಗಜೀಣಗಿ:- ಮಾನ್ಯ ಉಪಾಧ್ಯಕ್ಷರೆ, ಶಾಸಕರು ಇಲ್ಲದೇ ಜನಸಂಪರ್ಕ ಸಭೆಯನ್ನು ನಡೆಸಿದ್ದಾರೆ ಎಂದು ಮಾನ್ಯ ಸದಸ್ಯರು ಇದೀಗ ತಾನೆ ನನ್ನ ಗಮನಕ್ಕೆ ತಂದಿದ್ದಾರೆ. ಆದರೆ ಶಾಸಕರು ಇಲ್ಲದೆ ಮಾಡಬಾರದು ಎಂದು ನಾನು ಇವೊತ್ತೇ ಎಲ್ಲಾ ಕಡೆ ಸೂಚನೆಯನ್ನು ಕಳುಹಿಸುತ್ತೇನೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಧ್ಯಕ್ಷರು ಒಪ್ಪಿದ್ದಾರೆ. ಇದು ಬಹಳ ಗಹನವಾದಂಥ ವಿಚಾರ. ಶಿವಮೊಗ್ಗ ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಕಳಿಸಿರತಕ್ಕಂಥ ಆಯಿಲ್ ಕಲಬೆರಕೆಯಾಗಿ . . .

ಉಪಾಧ್ಯಕ್ಷರು:- ನಾನು ಮಲ್ಲಿಕಾರ್ಜುನ ಖರ್ಗೆಯವರಿಗೆ ಕರೆದಾಗ ನೀವು ನಿಂತರೆ ಹೇಗೆ?

ಶ್ರೀ ಐ.ಎಂ. ಜಯರಾಂ ಶೆಟ್ಟಿ:- ನಮಗೆ ಮಾತನಾಡುವುದಕ್ಕೆ ಒಂದು ದಿವಸವೂ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ? ಮಾತನಾಡುವುದಕ್ಕೆ ಸೀನಿಯಾರಿಟಿ ಮುಖ್ಯನಾ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಬಹಳ ಪ್ರಾಮುಖ್ಯವಾದಂಥ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಇಲ್ಲಿ ನಿಂತಿದ್ದೇನೆ. ಸ್ವಲ್ಪ ತಡವಾದರೂ ಪರವಾಗಿಲ್ಲ ತಾವು ಅವಕಾಶ ಮಾಡಿಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥದ್ದೇನೆಂದರೆ ಮೊನ್ನೆ ಮೂರನೇ ತಾರೀಖು ಕೋಲಾರ ಜಿಲ್ಲೆಯಲ್ಲಿ ಮೂರುವರೆ ಗಂಟೆಗೆ ಮಾನ್ಯ ಸಚಿವರು . . .

ಉಪಾಧ್ಯಕ್ಷರು:- ಈಗ ಎರಡು ಗಂಟೆಯಾಗಿದೆ ತಾವು ಸ್ವಲ್ಪ ಬೇಗ ಸಂಕ್ಷಿಪ್ತವಾಗಿ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ನಂತರ ಪ್ರಸ್ತಾಪ ಮಾಡಿ ಎಂದರೆ ಮಾಡುತ್ತೇನೆ.

ಉಪಾಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ ಪುನಃ ಮೂರು ಗಂಟೆಗೆ ಸೇರುವುದು.

(ಸಭೆಯು 1-56ಕ್ಕೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಪುನರ್‌ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(ಸಭೆಯು ಮಧ್ಯಾಹ್ನ 3.10 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರ ಪೀಠವನ್ನು ಮಾನ್ಯ ಉಪಾಧ್ಯಕ್ಷರು ಅಲಂಕರಿಸಿದರು)

೫೫) ಐ.ಸಿ.ಡಿ.ಎಸ್. ಯೋಜನೆಯಲ್ಲಿ ಕಳಪೆ ಗುಣಮಟ್ಟದ ಎಣ್ಣೆಯ ಸರಬರಾಜು.

+ ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಜರೂರಾಗಿರತಕ್ಕಂತಹ ಮತ್ತು ಬಹಳ ಭಯಾನಕವಾದಂತಹ ಒಂದು ಸಂಗತಿಯನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಯನ್ನು ಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಈ ಐ.ಸಿ.ಡಿ.ಎಸ್. ಯೋಜನೆಯಲ್ಲಿ ಅಂಗನವಾಡಿಗಳು ಎಂದು ತೆರೆದಿದ್ದಾರೆ. ಅಂಗನವಾಡಿಗಳಲ್ಲಿ ಗರ್ಭಿಣಿ ಸ್ತ್ರೀಯರಿಗೆ ಮತ್ತು ಜೀರೋದಿಂದ 5 ವರ್ಷದ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡತಕ್ಕಂತಹ ಒಂದು ಯೋಜನೆ ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಇದಕ್ಕೆ ಅಪಾರವಾದಂತಹ ಹಣವನ್ನು ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ವಿನಿಯೋಗವಾಗುತ್ತಿದೆ. ಇದನ್ನು ಉಪಯೋಗಿಸಿಕೊಂಡು ಅನೇಕರು ಈ ಒಂದು ಗರ್ಭಿಣಿಯವರಿಗೆ ಮತ್ತು ಮಕ್ಕಳಿಗೆ ಕೊಡತಕ್ಕಂತಹ ಪೌಷ್ಟಿಕ ಆಹಾರವನ್ನು ಕೊಟ್ಟು ಮಕ್ಕಳನ್ನು ಮತ್ತು ಗರ್ಭಿಣಿ ಮಹಿಳೆಯರನ್ನು ಏನು ಸಲುಹಬೇಕಾಗಿತ್ತು, ಇದಕ್ಕೆ ಬದಲಾಗಿ ವಿಷವನ್ನು ತಿನ್ನಿಸತಕ್ಕಂತಹ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಈ ಆಹಾರದಲ್ಲಿ ಕಲಬೆರಕೆಯನ್ನು ಮಾಡಿ, ಇದರಲ್ಲಿಯೂ ಕೂಡ ಗಂಟು ಹೊಡೆಯತಕ್ಕಂತಹ, ದುಡಿಮೆಯನ್ನು ಮಾಡತಕ್ಕಂತಹ, ಅಯೋಗ್ಯ ಜನ, ಭ್ರಷ್ಟ ಅಧಿಕಾರಿಗಳು, ಗುತ್ತಿಗೆದಾರರು ಸೇರಿಕೊಂಡು ಈ ಆಹಾರವನ್ನು ಪೂರೈಸಿ ನಮ್ಮ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರನ್ನು ಕೊಲೆ ಮಾಡತಕ್ಕಂತಹ ಒಂದು ವ್ಯವಸ್ಥಿತವಾದಂತಹ ಒಂದು ತಂತ್ರಗಾರಿಕೆಯನ್ನು ಉಪಯೋಗಿಸುತ್ತಿದ್ದಾರೆ. ಈ ರೀತಿಯಾಗಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿದೆ. ಇದರ ಬಗ್ಗೆ ನಿನ್ನೆ ಮತ್ತು ಮೊನ್ನೆ ಪ್ರಜಾವಾಣಿ ಪತ್ರಿಕೆಯ ಸಂಪಾದಕೀಯದಲ್ಲಿ ಆಗ್ರ ಲೇಖನಗಳು ಕೂಡ ಆದರಲ್ಲಿ ಬಂದಿದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಪೂರೈಸಿರತಕ್ಕಂತಹ ಆಯಿಲ್ ಏನಿದೆ, ಎಡಿಬಲ್ ಆಯಿಲ್, ಇದರ ಸ್ಯಾಂಪಲ್‌ನ್ನು ತೆಗೆದುಕೊಂಡು ಬಂದು ಬೆಂಗಳೂರಿನ ಮಹಾನಗರಪಾಲಿಕೆಯ ಲ್ಯಾಬ್‌ನಲ್ಲಿ ಟೆಸ್ಟ್ ಮಾಡಿದಾಗ, ಇದು ಕಳಪೆ ಗುಣಮಟ್ಟದ್ದು ಮಾತ್ರ ಅಲ್ಲ, ಇದು ಕಲಬೆರಕೆ, ಇದನ್ನು ಮನುಷ್ಯರು ತಿನ್ನುವುದಕ್ಕೇ, ಮನುಷ್ಯನ ಉಪಯೋಗಕ್ಕೆ ಅನರ್ಹವೆಂದು ಬೆಂಗಳೂರು ನಗರಪಾಲಿಕೆಯ ಚೀಫ್ ಕೆಮಿಸ್ಟ್ ಅನಾಲಿಸಿಸ್‌ನವರು ಹೇಳಿದ್ದಾರೆ. ಇದರ ಆಧಾರದ ಮೇಲೆ ಸಹಾಯಕ ನಿರ್ದೇಶಕರಿಗೆ ಇಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ